(ದಿನಾಂಕಃ ***13/11/2025*** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ –**

6. ಪೊಲೀಸರು ನನ್ನನ್ನು ಮತ್ತು ಇನ್ನೊಬ್ಬ ಪಂಚನನ್ನು ಎಸಿಬಿ ಪೊಲೀಸ ಠಾಣೆಗೆ ಕರೆಸಿದಾಗ ರಾಸಾಯನಿಕಗಳನ್ನು ಉಪಯೋಗಿಸಿ ಕೈತೊಳೆಯಿಸಿ ಕ್ರಮಕೈಗೊಂಡರು. ದ್ರಾವಣವನ್ನು ಸಂಗ್ರಹಿಸಿದರು. ಅವುಗಳನ್ನು ಗುರುತಿಸಬಲ್ಲೆ. ಈಗ ತೋರಿಸಿದ ಆರ್ಟಿಕಲ್ ಸಂಖ್ಯೆ-2 ಆಗ ತಯಾರಿಸಿದ ದ್ರಾವಣ ಇದ್ದು, ಅದನ್ನು ಮುಮಾ-3 ಎಂದು ಗುರುತಿಸಲಾಯಿತು. ಕೈತೊಳೆದ ನಂತರ ಸಂಗ್ರಹಿಸಿರುವ ದ್ರಾವಣದ ಬಣ್ಣ ಬದಲಾಯಿತು. ಈಗ ತೋರಿಸಿದ ಆರ್ಟಿಕಲ್ ಸಂಖ್ಯೆ-3 ಆಗ ಕೈತೊಳೆದು ತಯಾರಿಸಿದ ದ್ರಾವಣ ಇದ್ದು, ಅದನ್ನು ಮುಮಾ-4 ಎಂದು ಗುರುತಿಸಲಾಯಿತು. ಪಿರ್ಯಾದಿದಾರನ ಅಂಗಶೋಧನೆ ಮಾಡಿ ಅವನಲ್ಲಿ ಕರ್ಚಿಫ, ಮೊಬೈಲ್ ಮಾತ್ರ ಇದೆ ಎಂದು ತಿಳಿದುಕೊಂಡು ಮೇಲೆ ಹೇಳಿದ ನೋಟುಗಳನ್ನು ಅವರ ಜೇಬಿನಲ್ಲಿಡಿಸಿ, ನಾವು, ಪೊಲೀಸರು ಮತ್ತು ಪಿರ್ಯಾದಿದಾರ ಸೇರಿ ಹಿರೇಮಣಕಟ್ಟಿ ಗ್ರಾಮದ ಗ್ರಾಮ ಪಂಚಾಯ್ತಿ ಕಾರ್ಯಾಲಯಕ್ಕೆ ಹೋದೆವು. ಪಿರ್ಯಾದಿದಾರ ಕಿಲ್ಲೇದಾರ ಕಾರ್ಯಾಲಯದ ಒಳಗೆ ಹೋದರು. ನಾನು, ಪೊಲೀಸರು ಹೊರಗೆ ನಿಂತಿದ್ದೆವು. ಪೊಲೀಸರ ನಿರ್ದೇಶನದ ಮೇರೆಗೆ ನಾನು ಕಾರ್ಯಾಲಯದ ಒಳಗೆ ಹೋದೆ.

7. ನನ್ನನ್ನು ಕಂಡ ಚಾಸಾ-1 ಕೈಸನ್ನೆ ಮಾಡಿ ಹೊರಗೆ ಬಂದರು. ಪೊಲೀಸರು ಮತ್ತು ನಾವು ಹೋಗಿ ಆರೋಪಿ ಕಿಲ್ಲೇದಾರರವರನ್ನು ಹಿಡಿದೆವು. ಈ ದಿನ ಹಾಜರಿರುವ ವ್ಯಕ್ತಿಯೇ ಆರೋಪಿ ಇರುತ್ತಾರೆ. ಪುನಃ ರಾಸಾಯನಿಕ ದ್ರಾವಣ ತಯಾರಿಸಿ ಸಂಗ್ರಹಿಸಿದ್ದು, ಉಳಿದ ದ್ರಾವಣದಿಂದ ಆರೋಪಿಯ ಕೈ ತೊಳೆಸಿದರು. ಬಣ್ಣ ಬದಲಾಯಿತು. ಅದನ್ನು ಸಂಗ್ರಹಿಸಲಾಯಿತು. ಅವುಗಳನ್ನು ಗುರುತಿಸಬಲ್ಲೆ. ಈಗ ತೋರಿಸಿದ ಆರ್ಟಿಕಲ್ ಸಂಖ್ಯೆ-4 ಆಗ ತಯಾರಿಸಿದ ಮಾದರಿ ದ್ರಾವಣ ಹಾಗೂ ಆರ್ಟಿಕಲ್ ಸಂಖ್ಯೆ-5 ಆಗ ಬಲಗೈತೊಳೆಸಿದ ದ್ರಾವಣ ಮತ್ತು ಆರ್ಟಿಕಲ್ ಸಂಖ್ಯೆ-6 ಆಗ ಎಡಗೈ ತೊಳೆಸಿದ ದ್ರಾವಣ ಇದ್ದು, ಅವುಗಳನ್ನು ಕ್ರಮವಾಗಿ ಮುಮಾ-5 ರಿಂದ 7 ಎಂದು ಗುರುತಿಸಲಾಯಿತು. ಎಡಗೈ ತೊಳೆದ ದ್ರಾವಣದ ಬಣ್ಣ ಬದಲಾಗಿರುವುದಿಲ್ಲ.

8. ಆ ದಿನ ಆ ಮುಂಚೆ ಮುದ್ರಿಸಿಕೊಂಡ ಧ್ವನಿಯನ್ನು ಆಲಿಸಲಾಯಿತು. ನಂತರ ಸ್ವತ್ತುಗಳನ್ನು ಜಪ್ತಿಮಾಡಿ ಪಂಚನಾಮೆ ತಯಾರಿಸಲಾಯಿತು. *(ಮಾನ್ಯ ವಿ.ಸಾ.ಅ.ರವರ ವಿನಂತಿ ಮೇರೆಗೆ ಆರ್ಟಿಕಲ್ ಸಂಖ್ಯೆ-10ರ ಕವರನ್ನು ತೆರೆದು ಅದರಲ್ಲಿಯ ಸ್ವತ್ತನ್ನು ಸಾಕ್ಷಿಗೆ ತೋರಿಸಲಾಯಿತು.)* ಈಗ ತೋರಿಸಿದ ಪ್ಯಾಂಟು ಆ ದಿನ ಜಪ್ತಿಮಾಡಿದ್ದೇ ಇರುತ್ತದೆ. ಅದನ್ನು ಮುಮಾ-8 ಎಂದು ಗುರುತಿಸಲಾಯಿತು.

9. ಈಗ ತೋರಿಸಿದ ಪಂಚನಾಮೆ ಮೇಲೆ ನನ್ನ ಸಹಿಗಳಿದ್ದು, ಪಂಚನಾಮೆಯನ್ನು ನಿಪಿ-1, ಕೊನೆ ಪುಟದಲ್ಲಿಯ ನನ್ನ ಸಹಿಯನ್ನು ಈಗ ನಿಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿಯ ಮೇಲಾಧಿಕಾರಿ ಅಲ್ಲಿಗೆ ಬಂದರು. ವಿಷಯವನ್ನು ಅವರಿಗೆ ತಿಳಿಸಲಾಯಿತು. ಸದರಿ ಅಧಿಕಾರಿ ದಾಖಲೆಗಳನ್ನು ನೀಡಿದರು. ಅಲ್ಲಿಯೂ ಸಹ ನೋಟುಗಳ ಕ್ರಮ ಸಂಖ್ಯೆಯನ್ನು ಪರಿಶೀಲಿಸಿ ಬರೆದುಕೊಳ್ಳಲಾಯಿತು.

10. ಈಗ ತೋರಿಸಿದ ಮುಮಾ-2 (ಆರ್ಟಿಕಲ್ ಸಂಖ್ಯೆ-8) ಆ ದಿನ ಜಪ್ತಿ ಮಾಡಿದ್ದೇ ಇರುತ್ತದೆ. ದ್ರಾವಣದಿಂದ ಆರೋಪಿ ಪ್ಯಾಂಟಿನ ಭಾಗವನ್ನು ತೊಳೆದು ದ್ರಾವಣ ಸಂಗ್ರಹಿಸಲಾಯಿತು. ಈಗ ತೋರಿಸಿದ ಆರ್ಟಿಕಲ್ ಸಂಖ್ಯೆ-7 ಆಗ ಪ್ಯಾಂಟು ತೊಳೆದು ಸಂಗ್ರಹಿಸಿದ ದ್ರಾವಣ ಇದ್ದು, ಅದನ್ನು ಮುಮಾ-9 ಎಂದು ಗುರುತಿಸಲಾಯಿತು. ಆ ದಿನ ಆಲಿಸಿದ ಧ್ವನಿಯನ್ನು ಗುರುತಿಸಬಲ್ಲೆ.

11. (ಮಾನ್ಯ ವಿಶೇಷ ಅಭಿಯೋಜಕರ ವಿನಂತಿ ಮೇರೆಗೆ ಆರ್ಟಿಕಲ್ ಸಂಖ್ಯೆ-11 ಸೀಲ್ಡ್ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರಲ್ಲಿರುವ ಸಿ.ಡಿ.ಆರ್‌ನ್ನು ಮುಮಾ-10 ಎಂದು ಗುರುತಿಸಿ, ವಿಶೇಷ ಅಭಿಯೋಜಕರು ತರಿಸಲಾದ ಲ್ಯಾಪಟ್ಯಾಪನಲ್ಲಿ ಅಳವಡಿಸಿ ಧ್ವನಿಯನ್ನು ಆಲಿಸಲಾಯಿತು. ಸಾಕ್ಷಿಯು ಧ್ವನಿ ಆಲಿಸಿ ಧ್ವನಿ ಚಾಸಾ-1 ಮತ್ತು ಆರೋಪಿಯದು ಎಂದು ಗುರುತಿಸಿರುತ್ತಾರೆ.) ಈಗ ಕೇಳಿದ ಸಂಭಾಷಣೆಯಲ್ಲಿ ಚಾಸಾ-1 ರಿಗೆ ಆರೋಪಿ ದುಡ್ಡು ಕೇಳುವುದು ಕಂಡುಬಂದಿರುತ್ತದೆ. (ನಿಪಿ-*1* ರ *7*ನೇ ಪುಟದ *20.19* ರ ಶಬ್ದಗಳನ್ನು ಆಲಿಸಲಾಯಿತು.)

12. (ಮಾನ್ಯ ವಿಶೇಷ ಅಭಿಯೋಜಕರ ವಿನಂತಿ ಮೇರೆಗೆ ಆರ್ಟಿಕಲ್ ಸಂಖ್ಯೆ-12 ಸೀಲ್ಡ್ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರಲ್ಲಿರುವ ಸಿ.ಡಿ.ಆರ್‌ನ್ನು ಮುಮಾ-11 ಎಂದು ಗುರುತಿಸಿ, ವಿಶೇಷ ಅಭಿಯೋಜಕರು ತರಿಸಲಾದ ಲ್ಯಾಪಟ್ಯಾಪನಲ್ಲಿ ಅಳವಡಿಸಿ ಧ್ವನಿಯನ್ನು ಆಲಿಸಲಾಯಿತು. ಸಾಕ್ಷಿಯು ಧ್ವನಿ ಆಲಿಸಿ ಧ್ವನಿ ಆರೋಪಿಯದು ಎಂದು ಗುರುತಿಸಿರುತ್ತಾರೆ.) ಈಗ ಕೇಳಿದ ಸಂಭಾಷಣೆಯಲ್ಲಿ ಆರೋಪಿ ಮಾದರಿ ಧ್ವನಿ ಕಂಡುಬಂದಿರುತ್ತದೆ.

13. (ಮಾನ್ಯ ವಿಶೇಷ ಅಭಿಯೋಜಕರ ವಿನಂತಿ ಮೇರೆಗೆ ಆರ್ಟಿಕಲ್ ಸಂಖ್ಯೆ-13 ಸೀಲ್ಡ್ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರಲ್ಲಿರುವ ಸಿ.ಡಿ.ಆರ್‌ನ್ನು ಮುಮಾ-12 ಎಂದು ಗುರುತಿಸಿ, ವಿಶೇಷ ಅಭಿಯೋಜಕರು ತರಿಸಲಾದ ಲ್ಯಾಪಟ್ಯಾಪನಲ್ಲಿ ಅಳವಡಿಸಿ ಧ್ವನಿಯನ್ನು ಆಲಿಸಲಾಯಿತು. ಸಾಕ್ಷಿಯು ಧ್ವನಿ ಆಲಿಸಿ ಧ್ವನಿ ಚಾಸಾ-1 ರದು ಎಂದು ಗುರುತಿಸಿರುತ್ತಾರೆ.) ಈಗ ಕೇಳಿದ ಸಂಭಾಷಣೆಯಲ್ಲಿ ಚಾಸಾ-1 ರ ಮಾದರಿ ಧ್ವನಿ ಕಂಡುಬಂದಿರುತ್ತದೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ದಾಖಲೆಗಳನ್ನು ಹಾಗೂ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ, ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲು ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ –**

(ಸ್ವತ್ತು ಹಾಜರುಮಾಡದೇ ಇರುವ ಕಾರಣ ಮಾನ್ಯ ವಿ.ಸಾ.ಅ.ರವರ ವಿನಂತಿ ಮೇರೆಗೆ ಮುಂದೂಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾವೇರಿ.

(ದಿನಾಂಕಃ ***13/11/2025*** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.)

**ಪಾಟೀ ಸವಾಲು ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ –**

14. ಆರೋಪಿ ಲಂಚವಾಗಿ ಪಡೆದ ಹಣವನ್ನು ಗುರುತಿಸಬಲ್ಲೆ. (ಮಾನ್ಯ ವಿ.ಸಾ.ಅ.ರವರ ವಿನಂತಿ ಮೇರೆಗೆ ಆರ್ಟಿಕಲ್ ಸಂಖ್ಯೆ-*9*ರ ಕವರನ್ನು ತೆರೆದು ಅದರಲ್ಲಿಯ ಸ್ವತ್ತನ್ನು ಸಾಕ್ಷಿಗೆ ತೋರಿಸಲಾಯಿತು.) ಈಗ ತೋರಿಸಿದ ಹಣ ಹಾಗೂ ಹಣದ ಪೋಟೋ ಆ ದಿನ ಜಪ್ತಿಮಾಡಿದ್ದುವೇ ಇರುತ್ತವೆ. ರೂ.500/- 4 ನೋಟುಗಳನ್ನು ಒಟ್ಟಾಗಿ ಮುಮಾ-13 ಹಾಗೂ ರೂ.2,000/-ರ ಒಂದು ನೋಟಿನ ಪೋಟೋವನ್ನು ಮುಮಾ-14 ಎಂದು ಗುರುತಿಸಲಾಯಿತು. (ಆರೋಪಿ ವಕೀಲರು ಮುಮಾ-*13* ಮತ್ತು *14*ನ್ನು ಮುಮಾ-*2*ರೊಂದಿಗೆ ಹೋಲಿಸಿ ನೋಡಿ ತಾಳೆಯಾಗುತ್ತಿರುವ ಬಗ್ಗೆ ನಿವೇದಿಸಿರುತ್ತಾರೆ.)

**ಪಾಟೀ ಸವಾಲು ಆರೋಪಿ ಪರ ಶ್ರೀ ಯು.ಎನ್.ಜಿ. ವಕೀಲರಿಂದಃ–**

(ಸಂಜೆ *4.35* ಘಂಟೆಯಾಗಿದ್ದರಿಂದ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.